

## ಹೊಸ ಹುಮ್ಮಸ್ಸು ತುಂಬಿದೆ

ಹೊಸ ವರ್ಷದ ಹೊಸ್ತಿಲಿನಲ್ಲಿ, ‘2023 ಹುಡುಕಾಟ ಮುನ್ನೋಟ’ದ (ಜ.5) ವಿಭಿನ್ನ ಕ್ಷೇತ್ರಗಳ ಹೊಸ ನಿರೀಕ್ಷೆಗಳು ಪ್ರೇರಣಾತ್ಮಕವಾಗಿವೆ. ಸಮಾಜದೆಡೆಗೆ ನಮ್ಮ ಜವಾಬ್ದಾರಿಗಳನ್ನು ಮತ್ತೆ ನೆನಪಿಸಿದ್ದಾರೆ ಪರಿಣತರು. ಜವಾಬ್ದಾರಿಗಳನ್ನು ನಿಭಾಯಿಸುವ ಹೊಸ ಹುಮ್ಮಸ್ಸನ್ನೂ ಲೇಖನ ನೀಡಿದೆ.

—ಭಾವನಾ ಪಿ., ಬಾಗಲಕೋಟೆ

## ನಿರೀಕ್ಷೆಗಳು ನಿಜವಾಗಲಿ

ಈ ವರ್ಷ, ಹಲವು ಕ್ಷೇತ್ರಗಳಲ್ಲಿನ ಹೊಸ ನಿರೀಕ್ಷೆಗಳನ್ನು ‘ಹುಡುಕಾಟ ಮುನ್ನೋಟ’ ತೆರೆದಿಟ್ಟಿದೆ. ಕ್ಷೇತ್ರಪರಿಣತರ ಆ ನಿರೀಕ್ಷೆಗಳು ನಿಜವಾಗಲೆಂದು ಹಾರೈಸುವೆ.

— ಕಿರಣ್ ಕುಮಾರ್, ಚಾಮರಾಜನಗರ

## ಯುವಜನರಿಗೆ ಮಾದರಿ ಕ್ರೀಡಾಪಟು

‘ಚಿನ್ನದ ನಾಡಿನ ಅಪ್ರತಿಮ ಅಥ್ಲೀಟ್’ (ಜ.5, ಜಗನ್ನಾಥ ಪ್ರಕಾಶ್ ಎನ್.) ನಾಡಿನ ಒಬ್ಬ ಅಪ್ರತಿಮ ಅಥ್ಲೀಟ್ ಕೆನೆತ್ ಪೊವೆಲ್ ಅವರ ಪರಿಚಯ ಲೇಖನ ಮಾಹಿತಿಪೂರ್ಣವಾಗಿದೆ. ಒಲಿಂಪಿಕ್ಸ್‌ನಲ್ಲಿ ರುಜು ಹಾಕಿದ ಕರ್ನಾಟಕದ ಮೊದಲ ಅಥ್ಲೀಟ್ ಎಂದು ಓದಿ ಹೆಮ್ಮೆ ಎನಿಸಿತು. ಅಪರೂಪದ ಸಾಧನೆಗೈದ ಇಂಥ ಕ್ರೀಡಾಪಟುವಿನ ಪರಿಚಯ, ಮತ್ತವರ ಸಾಧನೆ ಯುವಜನತೆಗೆ ಮಾದರಿ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಹೆಣ್ಣಿನ ನೈಜ ಸ್ಥಿತಿ ತೆರೆದಿಟ್ಟ ಕಥೆ

‘ಎದೆಯೆಂಬೋ ಶಿವನ ಮುಂದೆ’ (ಜ.5, ಸಂತೆಬೆನ್ನೂರು ಫೈಜ್ನಟ್ರಾಜ್) ಕಥೆ ‘ಮಾಡಿದ್ದುಣ್ಣೋ ಮಹರಾಯ’ ಎನ್ನುವುದನ್ನು ಮನದಟ್ಟು ಮಾಡಿತು. ಕಥೆ ವಾಸ್ತವಕ್ಕೆ ಕನ್ನಡಿ ಹಿಡಿದಂತಿದ್ದರೂ, ಎರಡು ಹೆಣ್ಣು ಜೀವಗಳ ಜೀವನದ ಅಳಲು ಮಾತ್ರ ದುಃಖ ತರಿಸಿತು.

—ಅನಸೂಯ ತ್ರಿವಿಕ್ರಮ್, ಕೇದಿಗೆಮನೆ

## ಭಾವಗಳ ಸರಾಗ ನಿರೂಪಣೆ

ವಸುಮತಿ ಉಡುಪ ಅವರ ‘ಅಂತಃಪುರ’ ಧಾರಾವಾಹಿ, ಮನದಲ್ಲಿ ಹರಿಯುವ ನದಿಯಂತೆ ಸಲೀಸಾಗಿ ಓದಿಸಿಕೊಂಡು ಹೋಗುತ್ತಿದೆ. ಮನಸ್ಸಿಗೆ ಸಂತೋಷ ನೀಡುತ್ತಿದೆ. ಎಚ್.ಎಸ್. ಮೋಣಪ್ಪ ಅವರ ಕುಂಚ, ಕಥೆಗೆ ಪಕ್ಕವಾದ್ಯದಂತೆ ಸಾಥ್ ನೀಡುತ್ತಿದೆ.

—ಕೆ.ಎಂ. ಮಧ್ವರಾಯ, ಬೆಂಗಳೂರು

## ಮೆಚ್ಚುಗೆಯ ಪ್ರವಾಸ ಕಥನ

‘ಸೇಂಟ್ ಲೂಯಿಸ್’ (ಜ.5, ಡಾ. ಬಿ.ಆರ್. ಗುರುಪ್ರಸಾದ್) ಪ್ರವಾಸ ಕಥನ ಬಹಳ ಚೆನ್ನಾಗಿದೆ. ನಗರದ ಉಗಮದಿಂದ ಹಿಡಿದು ಅದು ಹೇಗೆ ಹಂತಹಂತವಾಗಿ ಬೆಳವಣಿಗೆ ಕಂಡಿತು ಎಂಬುದನ್ನು ಮನಮುಟ್ಟುವ ಹಾಗೆ ಚಿತ್ರಿಸಿದ್ದಾರೆ. ಬಿಲ್ಲಿನ ಹಾಗೆ ಬಾಗಿರುವ ಮಹಾದ್ವಾರ ಕಮಾನು, ವಸ್ತು ಸಂಗ್ರಹಾಲಯ, ಮಿಸ್ಸೋರಿ ಮಿಸ್ಸಿಸ್ಸಿಪ್ಪಿ ನದಿ, ಮರ ಗಿಡಗಳು, ಉದ್ಯಾನವನ... ಹೀಗೆ ಎಲ್ಲದರ ವಿವರಣೆಯೂ ಸೊಗಸಾಗಿದೆ.

—ಕೆ. ಗಣೇಶ ರಾಜ, ಬೆಂಗಳೂರು



## ಅರಿವು ಮೂಡಿಸಿದ ಲಹರಿ

‘ಕಲಿಯಬಾರದ ಪಾಠ’ (ಜ.5, ಜಿ.ವಿ. ಆನಂದಮೂರ್ತಿ) ವಿಚಾರ ಲಹರಿ, ಜಾತಿಬೇಧ ಇಲ್ಲದೇ, ದ್ವೇಷದ ಪರಿಣಾಮವರಿತು, ಜೀವನ, ದೇಶಸೇವೆ ಮಾಡಿದರೆ ‘ವಿಶ್ವಮಾನವ ತತ್ವ’ ಧ್ಯೇಯ ಪೂರ್ಣವೆಂಬುದರ ಅರಿಕೆ ಮಾಡಿದೆ.

—ಕೊಮರ್ಲ ಸತ್ಯನಾರಾಯಣ

## ಕನ್ನಡದ ಬಗ್ಗೆ ಸ್ಫೂರ್ತಿ ತುಂಬಿದ ದೊರಂಗೌ

ಒಂದು ಹಳೇ ನೆನಪು. 1994ರಲ್ಲಿ ವಿಜಯನಗರದ ವಾಸವಿ ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ದೊಡ್ಡರಂಗೇಗೌಡರನ್ನು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷರನ್ನಾಗಿ ಆಹ್ವಾನಿಸಲಾಗಿತ್ತು. ಅಂದು ಅವರು ಮಾಡಿದ ಕನ್ನಡಪರ ಭಾಷಣ ಇಂದೂ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದಂತಿದೆ.

ದೊರಂಗೌ ಕನ್ನಡ ಪ್ರಾಧ್ಯಾಪಕರಾಗಿ, ಬಹುಮುಖ್ಯವಾಗಿ ಕನ್ನಡಾಭಿಮಾನಿಯಾಗಿ ನಮಗೆ ಸ್ಫೂರ್ತಿ ತುಂಬಿದವರು. ಕರ್ನಾಟಕದಲ್ಲಿ ಕನ್ನಡಿಗನೇ, ಕನ್ನಡವೇ ಸಾರ್ವಭೌಮ. ಆದರೆ ರಾಜಧಾನಿಯಲ್ಲಿನ ಅನ್ಯಭಾಷಿಕರ ಕನ್ನಡ ವಿರೋಧಿ ಧೋರಣೆ, ಕನ್ನಡದವರಾಗಿದ್ದರೂ ಕನ್ನಡದ ಕುರಿತ ತಾತ್ಸಾರದ ನಿರಭಿಮಾನಿ ಕನ್ನಡಿಗರಿಂದ ಇಂದು ಕರ್ನಾಟಕದಲ್ಲಿ ಕನ್ನಡದವರೇ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ದುಃಸ್ಥಿತಿ.

ಇದಕ್ಕೆಲ್ಲಾ ಪರಿಹಾರ, ದೊರಂಗೌ ಹೇಳಿದಂತೆ, ಪ್ರಾಥಮಿಕ ಶಿಕ್ಷಣವನ್ನು ಕನ್ನಡದಲ್ಲೇ ನೀಡುವುದು. ಇಂದು ನಮ್ಮ ಮಕ್ಕಳು ಇತ್ತ ಕನ್ನಡಿಗರೂ ಅಲ್ಲದೆ ಅತ್ತ ಇಂಗ್ಲಿಷ್ ಅನ್ನೂ ಸರಿಯಾಗಿ ಕಲಿಯದೆ ಎಡಬಿಡಂಗಿಗಳಾಗುತ್ತಿದ್ದಾರೆ. ಈ ಬಗ್ಗೆ ಯಾವ ರಾಜಕೀಯ ಪಕ್ಷಗಳಿಗೂ ಒತ್ತಾಸೆ, ಕಾಳಜಿ ಇಲ್ಲ.

—ವಿಜಯ್ ಮಂಜುನಾಥ್

## ಔಚಿತ್ಯಪೂರ್ಣ ಸಂದರ್ಶನ



‘ಕನ್ನಡಪರ ಹಕ್ಕೊತ್ತಾಯಗಳ ಅನುಷ್ಠಾನ: ಸರ್ಕಾರಕ್ಕೆ ಇಚ್ಛಾಶಕ್ತಿಯೇ ಇಲ್ಲ’ (ಜ.5, ರಾಘವೇಂದ್ರ ಕೆ. ತೊಗರ್ಸಿ) ಮಾತುಕತೆ ಅಂಕಣದ, ಸಾಹಿತಿ ದೊಡ್ಡರಂಗೇಗೌಡರ ಸಂದರ್ಶನ ವಾಸ್ತವಿಕ ನುಡಿಗಳಿಂದ ಸರಾಗವಾಗಿ ಓದಿಸಿಕೊಂಡು ಗಮನ ಸೆಳೆಯಿತು.

—ವಿ. ಹೇಮಂತಕುಮಾರ್, ಬೆಂಗಳೂರು

ಸಾಹಿತಿ ದೊಡ್ಡರಂಗೇಗೌಡರ ಸಂದರ್ಶನ ಔಚಿತ್ಯಪೂರ್ಣವಾಗಿದೆ, ಅವರನ್ನು ಹಾವೇರಿ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದು ಸಂತಸದ ಸಂಗತಿ.

—ಜಗದೀಶ ಬಿ. ಹೊಸೂರು, ಮೈಸೂರು

ದೊಡ್ಡರಂಗೇಗೌಡರ ಸಂದರ್ಶನ ಸಕಾಲಿಕ. ಒಂದರಿಂದ ಏಳನೇ ತರಗತಿವರೆಗೆ ಎಲ್ಲರೂ ಕನ್ನಡ ಮಾಧ್ಯಮದಲ್ಲಿ ಓದಬೇಕು, ಆಡಳಿತ ಭಾಷೆ ಸಂಪೂರ್ಣ ಕನ್ನಡಮಯ ಆಗಬೇಕು ಎನ್ನುವ ಇವರ ಕಳಕಳಿ ಮಾತು ಒಪ್ಪಬೇಕಾದ್ದು.

—ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in